ಹೇಳಿ, ಸರಿಯಾಗಿ ಎದುರಾಳಿಗೆ ಸೆಡ್ಡು ಹೊಡೆದರು. ತೀರ್ಮಾನವಾದಂತೆ ಆಹ್ವಾನಿತರನ್ನು ಸಮ್ಮೇಳನಕ್ಕೆ ಕರೆದರು. ಇದು ಚಂಪಾ ಅವರ ನಿಜವಾದ ಧೈರ್ಯ ದರ್ಶನ. ಕೆಲವು ವರ್ಷಗಳ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಾಡಿದ ಧೈರ್ಯದರ್ಶನಕ್ಕೂ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮಾಡಿದ ಧೈರ್ಯದರ್ಶನಕ್ಕೂ ಸಾಕಷ್ಟು ವ್ಯತ್ಯಾಸವಿತ್ತು. ಅಂದಿನದು ಸೀಮಿತ ಉದ್ದೇಶದ ಸೇವಾರ್ಥ ಧೈರ್ಯದರ್ಶನ; ಇಂದಿನದು ಸಾಂಸ್ಕೃತಿಕ ಸ್ವಾಯತ್ತತೆಯನ್ನು ಸಾರುವ ಸೈದ್ಧಾಂತಿಕ ಧೈರ್ಯದರ್ಶನ. ಇಲ್ಲಿ ಸೀಮಿತಗಳನ್ನು ಮೀರಿ ಸೈದ್ಧಾಂತಿಕವಾಗಿ ಬೆಳೆದು ಬಂದ ಬಂಡಾಯಗಾರ ಚಂಪಾ ಅವರು 'ಧೈರ್ಯ'ಕ್ಕೆ ತಾತ್ವಿಕತೆಯ ರೂಪ ನೀಡಿದ್ದರು. ಇದೇ ಕಾರಣಕ್ಕೆ ಚಂಪಾ ಭಿನ್ನದನಿಯ ಬಂಡಾಯಗಾರರಾಗಿ ಮುಖ್ಯವಾಗುತ್ತಾರೆ. ಬದುಕುತ್ತಿರುವ ಸಮಾಜಕ್ಕೂ ಗುರುತಿಸಿಕೊಂಡ ಸಂಘಟನೆಗೂ ವಿಮರ್ಶಕ ಸ್ಥಾನದಲ್ಲಿ ನಿಂತ ವಿಭಿನ್ನ ವ್ಯಕ್ತಿ ವಿಶಿಷ್ಟರಾಗಿಯೂ ಕಾಣಿಸುತ್ತಾರೆ.

ಚಂಪಾ ಅವರ ವ್ಯವಸ್ಥೆ ವಿರೋಧಿ ನಿಲುವಿಗೆ ಅವರು ಇಂದಿರಾ ಗಾಂಧಿಯವರ ಕಾಲದ ತುರ್ತು ಪರಿಸ್ಥಿತಿಯನ್ನು ನೇರವಾಗಿ ವಿರೋಧಿಸಿದ್ದು ಒಂದು ಉಲ್ಲೇಖನೀಯ ಉದಾಹರಣೆ. ಆಗ ಅವರು 25 ದಿನ ಜೈಲು ಸೇರಬೇಕಾಯಿತು. ಹೀಗೆ ಜೈಲು ಸೇರಬೇಕಾಗಿಬಂದ ಮೊದಲ ಕನ್ನಡ ಸಾಹಿತಿ ಚಂಪಾ.

ಬಿಚ್ಚು ಮಾತು ಮತ್ತು ಚುಚ್ಚು ಮಾತು–ಚಂಪಾ ಅವರ ಲಿಖಿತ ಮತ್ತು ಮೌಖಿಕ ಗುಣಲಕ್ಷಣವಾಗಿ ಬಿಂಬಿತವಾಗಿದೆ. ಅವರು ಬಿಚ್ಚು ಮಾತಿನವರೆಂಬುದು ನಿಜ. ಆದರೆ, ಅವರ ಚುಚ್ಚು ಮಾತು ಒಂದೇ ಆಯಾಮದಲ್ಲಿ ಅದು ಗಾಯ ಮಾಡುವ ಮಾತಲ್ಲ. ಕಟುವಾದರೂ ಕಚಗುಳಿಯಂತೆ ಭಾಸವಾಗುವ ಮಾತು. ಕೆಲವು ಕಡೆ ಕೀಟಲೆಯ ಮಾತು. ಕೀಟಲೆ ಎನ್ನುವುದು ಕಿಡಿಗೇಡಿತನವಲ್ಲ; ಹೊಣೆಗೇಡಿತನವೂ ಅಲ್ಲ. ಚಂಪಾ ಅವರು ಬಿಚ್ಚು ಮತ್ತು ಚುಚ್ಚುನುಡಿಗಳ ಅಭಿಯಾನವನ್ನು ಸಾಮಾಜಿಕ ಹೊಣೆಗಾರಿಕೆಯಂತೆ ಭಾವಿಸಿದರು; ಬರೆದರು; ಜರೆದರು. ಆದರೆ, ಅದೆಲ್ಲವನ್ನೂ ಪ್ರೀತಿಯಿಂದ ಮಾಡಿದರು. ಅವರು ಒಮ್ಮೆ ಹೀಗೆ ಬರೆದರು:

''ಪ್ರೀತಿ ಇಲ್ಲದೆ
ನಾನು ಏನನ್ನೂ ಮಾಡಲಾರೆ
ದ್ವೇಷವನ್ನೂ ಕೂಡ'' (ಅರ್ಧ ಸತ್ಯದ ಹುಡುಗಿ)

ತಮ್ಮ ಸ್ವಭಾವ ಮತ್ತು ಸೃಜನಶೀಲತೆಯನ್ನು ಕುರಿತು 'ಕೆಲವು ಗೆಳೆಯರಿಗೆ' ಎಂಬ ಕವನದಲ್ಲಿ 'ಚಂಪಾ' ಅವರು ನುಡಿದಿರುವುದನ್ನು ಕೂಡ ಇಲ್ಲಿ ಉಲ್ಲೇಖಿಸಬೇಕು:

''ಕೇಳದಿದ್ದರೂ ಹೇಳುತ್ತೇನೆ ಕೇಳುವಿರ ಗೆಳೆಯರೇ!
ಒಳಗೆ ಅನ್ನಿಸಿದ್ದನ್ನು ಅನ್ನಿಸಿದಂತೆ ಆಡದಿದ್ದರೆ
ನನಗೆ ನಿದ್ದೆ ಬರುವುದೇ ಇಲ್ಲ, ನನಗೆ
ನಿದ್ದೆ ಬರದಿದ್ದರೆ ಕನಸು ಬೀಳುವುದೇ ಇಲ್ಲ. ನನಗೆ ಕನಸು
ಬೀಳದಿದ್ದರೆ ನಾನು ಕವನ ಬರೆಯುವುದೇ ಇಲ್ಲ.
ಕನಸು ಕಾಣದೇ ಕವನ ಬರೆಯುವುದು ಹ್ಯಾಗೆ?
ನಿದ್ದೆ ಬಾರದೆ ಕನಸು ಕಾಣುವುದು ಹ್ಯಾಗೆ?
ಕೊಳೆತ ಹಲ್ಲಿಗೆ ಕೊಳೆತ ಹಲ್ಲೆಂದು ಕರೆಯದೆ
ನಿದ್ದೆ ಬರುವುದು ಹ್ಯಾಗೆ?
ಹೇಳುವಿರಾ ಗೆಳೆಯರೇ?'' (ಶಾಲ್ಮಲಾ ನನ್ನ ಶಾಲ್ಮಲಾ)